S.C. 48/2021.

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.**

**ಸತ್ರ ಮೊಕದ್ದಮೆ ಸಂಖ್ಯೆ 48/2021.**

| | | | |
|---|---|---|---|
| ಹೆಸರು | : | ನೀಲಪ್ಪ ಇದ್ದಲಗಿ | ಫ್ರಾಸಾ-02 |
| ತಂದೆಯ ಹೆಸರು | : | ವೀರಪ್ಪ | ಚಾಸಾ-02 |
| ವಯಸ್ಸು | : | 47 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಚಿತ್ತವಾಡಗಿ | |

ದಿನಾಂಕಃ 28-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಹಾಗೂ ಚಾಸಾ-1 ಪರಿಚಯ.

ದಿನಾಂಕಃ 03-03-2020 ರಂದು ಬೆಳಗ್ಗೆ 9.30 ಗಂಟೆಗೆ ಪಂಚನಾಮೆ ಮಾಡಿದ್ದಾರೆ. ಸದರಿ ಪಂಚನಾಮೆಯನ್ನು ಹುಲ್ಲಪ್ಪ ಮೇಟಿ ಇವರ ಹೊಲದಲ್ಲಿ ಜಗಳವಾದ ವಿಷಯದಲ್ಲಿ ಮಾಡಿದ್ದಾರೆ. ನಿಪಿ-2,3 ನೋಡಿ ಗುರುತಿಸಿದ್ದೇನೆ. ಮುಮಾ-1 ರಿಂದ 4 ನೋಡಿ ಗುರುತಿಸಿದ್ದೇನೆ. ಪಂಚನಾಮೆಯನ್ನು ನಿಪಿ-4 ಅಂತಾ, ಸಹಿಯನ್ನು ನಿಪಿ-4(ಎ) ಅಂತಾ ಗುರುತಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಎ.ಹೆಚ್ ವಕೀಲರಿಂದ.**

ಚಾಸಾ-1 ಹಾಗೂ ನಾನು ಒಂದೇ ಜಾತಿಯವರು. ಪೊಲೀಸರು ಪಂಚನಾಮೆಗೆ ಕರೆಯಿಸಿದ್ದರು. ಪಂಚನಾಮೆಯನ್ನು ಯಾರು ಬರೆದಿದ್ದಾರೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ, ಪೊಲೀಸರ ಸೂಚನೆ ಮೇರೆಗೆ ಸಹಿ ಮಾಡಿದ್ದೇನೆ. ಮುಮಾ-1 ರಿಂದ 4 ಅಮಾನತುಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ. ಚಾಸಾ-1 ನಮ್ಮ ಸಮಾಜದವನು ಇರುವುದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

28-02-2026

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಸಂಚಾರಿ ನ್ಯಾಯಾಲಯ, ಹುನಗುಂದ.

S.C. 48/2021.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

## ಸತ್ರ ಮೊಕದ್ದಮೆ ಸಂಖ್ಯೆ: 48/2021.

| | | | |
|---|---|---|---|
| ಹೆಸರು | : | ಶಿವಾನಂದ ಕರಪಡಿ | ಫ್ರಾಸಾ-01 |
| ತಂದೆಯ ಹೆಸರು | : | ಯಮನಪ್ಪ | ಚಾಸಾ-01 |
| ವಯಸ್ಸು | : | 56 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಚಿತ್ತವಾಡಗಿ | |

ದಿನಾಂಕಃ 28-02-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ಚಾಸಾ-4,5 ನನ್ನ ತಮ್ಮಂದಿರು. ಚಾಸಾ-6,7 ಪರಿಚಯ.

ದಿನಾಂಕಃ 02-03-2020 ರಂದು ಸಾಯಂಕಾಲ 5.00 ಗಂಟೆಗೆ ನನ್ನ ತಮ್ಮ ಸಂಗಪ್ಪ ಹುಚನೂರಿಗೆ ಹೋದ. ಆಗ ನಾನು ಮನೆಯಲ್ಲಿದ್ದೆ. ಚಾಸಾ-7 ನಿನ್ನ ತಮ್ಮನನ್ನು ಲಕ್ಷ್ಮಣನ ಹೊಲದ ಹತ್ತಿರ ಹೊಡೆಯುತ್ತಿದ್ದಾರೆ ಎಂದು ಹೇಳಿದ. ಆಗ ನಾನು ಮತ್ತು ಚಾಸಾ-4 ರಿಂದ 7 ಹೋಗಿ ಜಗಳ ಬಿಡಿಸಿದೆವು. ಇಬ್ಬರು ಕಲ್ಲು ಹಿಡಿದಿದ್ದರು ಹಾಗೂ ಇಬ್ಬರು ಬಡಿಗೆ ಹಿಡಿದಿದ್ದರು. ಕಲ್ಲು ಹಿಡಿದವರ ಹೆಸರು ನನಗೆ ಗೊತ್ತಿಲ್ಲ. 4 ನೇ ಆರೋಪಿ ಕಲ್ಲಿನಿಂದ ಹೊಡೆದ, 5 ನೇ ಆರೋಪಿ ಬಡಿಗೆಯಿಂದ ಹೊಡೆದ. ಪುನಃ ಹೇಳುವುದೇನೆಂದರೆ 5 ನೇ ಆರೋಪಿ ಕೈ ಹಿಡಿದಿದ್ದ. ಆರೋಪಿ-1 ಮತ್ತು 2 ಕೈಯಿಂದ ಹೊಡೆದರು. ನಾವು ಬರುವುದನ್ನು ನೋಡಿ ಆರೋಪಿತರು ಓಡಿ ಹೋದರು.

ನನ್ನ ತಮ್ಮನ ತಲೆ, ಬೆನ್ನು, ಕೈ, ಮೈ ಎಲ್ಲ ಪೆಟ್ಟಾಗಿತ್ತು. ನಂತರ ಅವನನ್ನು ಹುನಗುಂದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದೆವು. ನಂತರ ಬಾಗಲಕೋಟೆ ಧನುಷ್ ಆಸ್ಪತ್ರೆಗೆ ದಾಖಲಿಸಿದೆವು. ಆಸ್ಪತ್ರೆಯಲ್ಲಿ 15 ದಿನ ಚಿಕಿತ್ಸೆ ಪಡೆದಿದ್ದಾನೆ. ಎಷ್ಟು ಖರ್ಚು ಆಗಿದೆ ನನಗೆ ಗೊತ್ತಿಲ್ಲ.

ನಂತರ ನಾನು ಠಾಣೆಗೆ ಬಂದು ಪಿರ್ಯಾದಿ ನೀಡಿದೆ. ಅದನ್ನು ನಿಪಿ-1 ಅಂತಾ, ಸಹಿಯನ್ನು ನಿಪಿ-1(ಎ) ಅಂತಾ ಗುರುತಿಸಲಾಯಿತು. ನಂತರ ಪೊಲೀಸರು ಸ್ಥಳಕ್ಕೆ ಬಂದು ಸ್ಥಳ ನೋಡಿದರು. ನಾನೇ ಸ್ಥಳ ತೋರಿಸಿದ್ದೇನೆ. ನ್ಯಾಯಾಲಯದ ಮುಂದಿರುವ 2 ಬಡಿಗೆಗಳನ್ನು ಮತ್ತು 2 ಕಲ್ಲುಗಳನ್ನು ನೋಡಿ ಗುರುತಿಸಿದ್ದೇನೆ. 2 ಬಡಿಗೆಗಳನ್ನು ಮುಮಾ-1 ಮತ್ತು 2 ಅಂತಾ, 2 ಕಲ್ಲುಗಳನ್ನು ಮುಮಾ-3 ಮತ್ತು 4 ಅಂತಾ ಗುರುತಿಸಲಾಯಿತು. ಗುನ್ಹಾ ಸ್ಥಳದ ಪೋಟೋಗಳನ್ನು ನಿಪಿ-2 ಮತ್ತು 3 ಅಂತಾ ಗುರುತಿಸಲಾಯಿತು.

**<u>ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಎ.ಹೆಚ್ ವಕೀಲರಿಂದ.</u>**

ಪಿರ್ಯಾದಿಯನ್ನು ನಮ್ಮೂರಿನ ಶಿವಪ್ಪ ಎನ್ನುವವನು ಬರೆದ, ಪೊಲೀಸರು ಟೈಪ್ ಮಾಡಿದ್ದಾರೆ. ಪಿರ್ಯಾದಿ ಬರೆಯಲು ನಾನೇ ಮಾಹಿತಿಯನ್ನು ನೀಡಿದ್ದೇನೆ. ಗುನ್ಹಾ ಸ್ಥಳ ನಮ್ಮ ಮನೆಯಿಂದ 2 ಕಿ.ಮೀ ಅಂತರದಲ್ಲಿದೆ. ಹೊನ್ನಪ್ಪ ಸಂಜೆ 5.00 ಗಂಟೆಗೆ ಫೋನ್ ಹಚ್ಚಿದ್ದ. ಸಾಕ್ಷಿ ಪುನಃ ಹೇಳುವುದೇನೆಂದರೆ 4.00 ಗಂಟೆಗೆ ಫೋನ್ ಹಚ್ಚಿದ್ದ, ನಾನು 5.00 ಗಂಟೆಗೆ ಸ್ಥಳಕ್ಕೆ ಹೋದೆ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಜಗಳ ಮುಗಿದಿತ್ತು. 1 ನೇ ಆರೋಪಿ ನಮ್ಮೂರಿನವನು. ಉಳಿದ ಆರೋಪಿತರು ಹುನಗುಂದದವರು.

ಹುಚನೂರ ಗ್ರಾಮದ ರಸ್ತೆ ಕಚ್ಚಾ ರಸ್ತೆ ಎನ್ನುವುದು ನಿಜ. ರಸ್ತೆ ಪಕ್ಕದಲ್ಲಿ ಒಂದೇ ಹೊಲ ಇದೆ. ಸದರಿ ರಸ್ತೆಯಲ್ಲಿ ಸಾಕಷ್ಟು ವಾಹನಗಳು ತಿರುಗಾಡುತ್ತವೆ. 1 ನೇ ಆರೋಪಿಯ ಜೊತೆ ಈ ಮೊದಲು ಗಲಾಟೆಯಾಗಿದ್ದು ಆ ವಿಷಯದಲ್ಲಿ ಪಿರ್ಯಾದಿ ನೀಡಿಲ್ಲ. ನನ್ನ ತಮ್ಮನ ಬಟ್ಟೆಯ ಮೇಲೆ ರಕ್ತದ ಕಲೆ ಬಿದ್ದಿತ್ತು. ರಕ್ತ ಹತ್ತಿದ ಬಟ್ಟೆಯನ್ನು ಪೊಲೀಸರಿಗೆ ನೀಡಿದ್ದೇವೆ.

4 ನೇ ಆರೋಪಿಯ ತಂದೆ ನನ್ನ ಹಾಗೂ ಚಾಸಾ-4 ರಿಂದ 7 ರ ಮೇಲೆ ಇದೇ ನ್ಯಾಯಾಲಯದಲ್ಲಿ ಈ ಕೇಸು ದಾಖಲಿಸುವ ಪೂರ್ವದಲ್ಲಿ

ಎಸ್.ಸಿ. ನಂ.44/2023 ದಾಖಲಿಸಿದ್ದಾರೆ ಎನ್ನುವುದು ನಿಜ. ಆರೋಪಿತರು ಕಾಂಗ್ರೇಸ್ ಪಕ್ಷದವರು ಎನ್ನುವುದು ನನಗೆ ಗೊತ್ತಿಲ್ಲ. ನಾನು ಬಿ.ಜೆ.ಪಿ ಪಕ್ಷದವನು ಎನ್ನುವುದು ಸರಿಯಲ್ಲ.

ಆರೋಪಿತರು ನನ್ನ ತಮ್ಮನಿಗೆ ಕಲ್ಲಿನಿಂದ, ಬಡಿಗೆಯಿಂದ ಹಾಗೂ ಕೈಯಿಂದ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 3 ನೇ ಆರೋಪಿ ಕಟ್ಟಿಗೆಯಿಂದ ಹೊಡೆದಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸರು ಗುನ್ನಾ ಸ್ಥಳಕ್ಕೆ ಬಂದಾಗ ನಾನು ಸ್ಥಳ ತೋರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತಮ್ಮ ಗಾಡಿ ಮೇಲಿಂದ ಬಿದ್ದು ಗಾಯಪಡಿಸಿಕೊಂಡಿದ್ದರೂ ಸಹಿತ ಆರೋಪಿತರ ಮೇಲೆ ಸುಳ್ಳು ಕೇಸು ದಾಖಲು ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಮುಮಾ-1 ರಿಂದ 4 ಗಳಿಂದ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

28-02-2026
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.